<u>ದಿ:**07.01.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ Sri.G.H.S., ವಕೀಲರಿಂದ:-

ನಾನು ಎಂ.ಎ., ಪದವಿದರನಾಗಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಮ್ಮ ಕುಟುಂಬದಲ್ಲಿ ಒಟ್ಟು 06 ಜನ ಇರುತ್ತೇವೆ. ನನ್ನ ಹೆಸರಿಗೆ 02 ಎಕರೆ ನಿರಾವರಿ ಜಮೀನು ಇರುತ್ತದೆ. ಅದಕ್ಕೆ ಸಂಬಂದಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಸದರಿ ಜಮೀನಿನಲ್ಲಿ ಅಡಿಕೆ ಬೆಳೆ ಇರುತ್ತದೆ. ಸದರಿ ಅಡಿಕೆ ಬೆಳೆಯಿಂದ ಈ ಹಿಂದೆ 5 ವರ್ಷದಿಂದ ವಾರ್ಷಿಕವಾಗಿ ರೂ.7 ರಿಂದ 9 ಲಕ್ಷದವರೆಗೆ ಆದಾಯ ಬಂದಿರುತ್ತದೆ. ಅದಕ್ಕೆ ಸಂಬಂದಿಸಿದ ಹಾಗೇ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನನಗೆ ಅಡಿಕೆ ಬೆಳೆ ಇದ್ದು, ವಾರ್ಷಿಕವಾಗಿ ರೂ.7 ರಿಂದ 9 ಲಕ್ಷದವರೆಗೆ ಆದಾಯ ಬಂದಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಂಬಂದಿಸಿದ ಹಾಗೇ ಜಗಳೂರು ಕೆನರಾ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ. ಸದರಿ ಖಾತೆಯಲ್ಲಿ 2020 ರಿಂದ ಇಲ್ಲಿಯವರೆಗೆ ರೂ.3,00,000/- ಅತಿ ಹೆಚ್ಚು ವ್ಯವಹಾರ ಮಾಡಿರುತ್ತೇನೆ. ಸದರಿ ಖಾತೆಗೆ ಸಂಬಂದಿಸಿದ ಹಾಗೇ ಅಕೌಂಟ್ ಸ್ಟೇಟ್ಮೆಂಟ್ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ನಿಪಿ1 ನನ್ನ ಬ್ಯಾಂಕ್ ಖಾತೆಗೆ ಜಮೆ ಮಾಡಿದ ಚೆಲನ್ ನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಆರೋಪಿ ನಡುವೆ ಆದ ವ್ಯವಹಾರ ಸಂಬಂದಿಸಿದ ಹಾಗೇ ನಿಪಿ1 ಚೆಕ್ ಬಿಟ್ಟು ಬೇರೆ ಯಾವ ದಾಖಲೆಗಳು ನನ್ನ ಬಳಿ ಇರುವುದಿಲ್ಲ.

ದಿ:18.04.2021 ರಂದು ಆರೋಪಿಯೂ ಜಗಳೂರಿನ SBI ಬ್ಯಾಂಕ್ ಮುಂಬಾಗ ಹಣ ಕೇಳಿರುತ್ತಾರೆ. ಆ ದಿನ ನನ್ನ ಮತ್ತು ಆರೋಪಿ ನಡೆದ ವ್ಯವಹಾರ ಬೇರೆ ಯಾರು ಸಹ ನೋಡಿರುವುದಿಲ್ಲ. ಆರೋಪಿಗೆ ನೀಡಿದೆ ಎಂದು ಹೇಳುವ ಹಣವು ನನ್ನ ಮನೆಯಲ್ಲಿ ಇತ್ತು. ನನ್ನ ಬಳಿ ಮನೆಯಲ್ಲಿ ರೂ.5 ಲಕ್ಷ ಇದ್ದ ಬಗ್ಗ ದಾಖಲೆಗಳು ಇರುವುದಿಲ್ಲ. ನಾನು 2020 ನವೆಂಬರ್ ತಿಂಗಳಲ್ಲಿ ಅಡಿಕೆ ಮಾರಿ ರೂ.3 ಲಕ್ಷ ಆದಾಯ ಬಂದಿರುತ್ತದೆ. ನನಗೆ ಸದರಿ 2020 ರ ನವೆಂಬರ್ ತಿಂಗಳಲ್ಲಿ ಅಡಿಕೆ ಖರೀದಿ ಮಾಡಿದವರ ಬಗ್ಗ ನೆನಪು ಇರುವುದಿಲ್ಲ. ಸದರಿ ಮಾರಾಟಕ್ಕೆ ಸಂಬಂದಿಸಿದ ಹಾಗೇ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಸದರಿ ವ್ಯವಹಾರವನ್ನು ಯಾರು ನೋಡಿರುವುದಿಲ್ಲ. ಖರೀದಿ ಮಾಡಿದವರ ಮೊಬೈಲ್ ನಂಬರು ನನಗೆ ನೆನಪು ಇರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ದಿ:18.06.2021 ರಂದು ಯಾವುದೇ ಹಣದ

ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿ. ದಿ:15.05.2021 ರಂದು ಆರೋಪಿ ನನಗೆ ಚೆಕ್ ನೀಡಿದ್ದಾರೆ ಎಂದು ಹೇಳುವ ದಿನದಂದು ಯಾರು ನೋಡಿರುವುದಿಲ್ಲ. ಅದನ್ನು ಆರೋಪಿ SBI ಬ್ಯಾಂಕ್, ಜಗಳೂರು ಮುಂಬಾಗ ನೀಡಿರುತ್ತಾರೆ. ಆಗ ಸಮಯ ಬೆಳಿಗ್ಗೆ 11.00 ಗಂಟೆಯಾಗಿತ್ತು. SBI ಬ್ಯಾಂಕ್, ಜಗಳೂರು ಮುಂಬಾಗದ ರಸ್ತೆ ಜನ ಓಡಾಡುವ ರಸ್ತೆ ಎಂದರೆ ಸರಿ. ಆರೋಪಿ ನನ್ನಿಂದ ತನ್ನ ಮನೆಯ ಖರ್ಚಿಗೆ ಹಣವನ್ನು ಪಡೆದುಕೊಂಡಿರುತ್ತಾರೆ. ಆರೋಪಿಯ ತಂದೆಯ ಹೆಸರು ಹಾಲಪ್ಪ ಇರುತ್ತದೆ. ಅವರ ಕುಟುಂಬದ ಎಷ್ಟು ಜನ ಸದಸ್ಯರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಬುಕ್ ಸ್ಟೋರ್ ನಡೆಸುತ್ತಾರೆ. ಜಗಳೂರಿನ SBI ಬ್ಯಾಂಕ್ ಮುಂಬಾಗ ಬುಕ್ ಸ್ಟೋರ್ ನಡೆಸುತ್ತಾರೆ. ಆರೋಪಿಯೂ ಜಗಳೂರಿನ ಹೊರಕೆರೆಯಲ್ಲಿ ವಾಸವಿರುತ್ತಾರೆ. ಅವರ ಮನೆಯ ವಿಳಾಸ ನಿಖರವಾಗಿ ನನಗೆ ಗೊತ್ತಿರುವುದಿಲ್ಲ. ಆರೋಪಿಯ ಬುಕ್ ಸ್ಟೋರ್ ನ ಹೆಸರು ನನಗೆ ಗೊತ್ತಿರುವುದಿಲ್ಲ. ನಿಪಿ5 ಅಂಚೆ ಲಕೋಟೆಯಲ್ಲಿ ಕಾಣಿಸುವ ವಿಳಾಸವನ್ನು ನಾನೇ ಬರೆಸಿರುತ್ತೇನೆ. ನಿಪಿ5 ರಲ್ಲಿ ಕಾಣುವ ವಿಳಾಸ ಆರೋಪಿಯದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯೂ ತಮ್ಮ ಬುಕ್ ಸ್ಟೋರ್ ನಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಇರುತ್ತಾರೆ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ನಿಪಿ5 ನ್ನು ಬೇರೆ ವಿಳಾಸಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿ. ನಾನು ನಿಪಿ5 ನ್ನು ಆರೋಪಿಯ ಬುಕ್ ಸ್ಟೋರ್ ಗೆ ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿ. ನಿಪಿ5 ರಲ್ಲಿ ಲಕೋಟೆಯಲ್ಲಿ ಕಾಣುವ ಶರವನ್ನು ಅಂಚೆ ಇಲಾಖೆಯವರು ನೀಡಿರುವುದಿಲ್ಲ ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಸರಿಯಾದ ವಿಳಾಸ ತಿಳಿದಿದ್ದರೂ ಸಹ ನಿಪಿ5 ನೋಟೀಸು ಆತನಿಗೆ ತಲುಪಬಾರದು ಎಂದು ಬೇರೆ ವಿಳಾಸಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.500/- ಮುಖಬೆಲೆಯ ನಗದು ರೂಪದಲ್ಲಿ ನೀಡಿರುತ್ತೇನೆ. ಅದನ್ನು ನಾನು SBI ಬ್ಯಾಂಕ್ ಮುಂಬಾಗ ದಿ:15.05.2021 ರಂದು ನೀಡಿರುತ್ತೇನೆ. ಸದರಿ ವ್ಯವಹಾರವನ್ನು ನೋಡಿದವರು ಯಾರು ಇರುವುದಿಲ್ಲ. ನಿಪಿ1 ಚೆಕ್ ಜಗಳೂರಿನ SBI ಬ್ಯಾಂಕ್ ಮುಂಬಾಗ ಬರವಣಿಗೆಯಾಗಿರುತ್ತದೆ. ನಿಪಿ1 ರಲ್ಲಿ ಕಾಣುವ ಬರವಣಿಗೆ ಬೇರೆ ಬೇರೆ ಶಾಹಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯೂ ನಿಪಿ1 ರಲ್ಲಿ ಇರುವ ದಿನಾಂಕ ಮತ್ತು ರೂ.5 ಲಕ್ಷ ಸಂಖ್ಯೆ ಮತ್ತು ಆರೋಪಿಯ ಸಹಿಯು ಆರೋಪಿ ಬರೆದುಕೊಟ್ಟಿರುತ್ತಾರೆ. ಮಹಂತೇಶ್.

ಒ ಮತ್ತು ರೂ.5 ಲಕ್ಷ ಮಾತ್ರ ಆಂಗ್ಲ ಬರವಣಿಗೆಯನ್ನು ನಾನು ಬರೆದಿರುತ್ತೇನೆ ಎಂದು ಹೇಳುತ್ತಾರೆ. ನನಗೆ ನಿಪಿ1 ಚೆಕ್ ರಚಿಸುವ ಪೂರ್ವದಲ್ಲಿ ಮತ್ತು ರಚಿಸಿದ ನಂತರ ಆರೋಪಿಯ ಸಹಿ ಮತ್ತು ಬರವಣಿಗೆ ಪರಿಚಯ ಇರುವುದಿಲ್ಲ ಎಂದರೆ ಸರಿ. ನಿಪಿ1 ರಲ್ಲಿ ಕಾಣುವ ಸಹಿ ಮತ್ತು ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಎಂದಿಗೂ ಸಹ ರೂ.5 ಲಕ್ಷ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ1 ಚೆಕ್ ನ್ನು ಆರೋಪಿ ನನಗೆ ಸಾಲದ ತಿರುವಳಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಗೆ ರೂ.5 ಲಕ್ಷ ಹಣ ನೀಡಲು ಆರ್ಥಿಕವಾಗಿ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ. ನಾನು ಆರೋಪಿ ಬಿಟ್ಟು ಬೇರೆಯವರೊಂದಿಗೆ 10-20 ಸಾವಿರ ಕೈಗಡ ಸಾಲವನ್ನು ನೀಡಿರುತ್ತೇನೆ. ಅವರ ಬಳಿ ಯಾವುದೇ ದಾಖಲೆಗಳನ್ನು ಬರೆಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಕಡಿಮೆ ಮೊತ್ತಕ್ಕೆ ಸಾಲ ನೀಡಿದ್ದರಿಂದ ದಾಖಲೆ ಪಡೆದುಕೊಂಡಿಲ್ಲ ಎಂದು ಹೇಳುತ್ತಾರೆ. ನಾನು ಸದರಿ ವ್ಯವಹಾರಗಳ ಬಗ್ಗೆ ಎಲ್ಲಿಯೂ ಸಹ ನಮೂದು ಮಾಡಿಕೊಂಡಿರುವುದಿಲ್ಲ. ನನ್ನನ್ನು ಜಗಳೂರು ಪೋಲಿಸರು ಆರೋಪಿಗೆ ಸಂಬಂದಿಸಿದ ಹಾಗೇ ಕರೆಯಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಈಗ ಸಾಕ್ಷಿಗೆ ಜಗಳೂರು ಪೋಲಿಸರು ಪಡೆದ ಹೇಳಿಕೆಯನ್ನು ತೋರಿಸಿ ಅದರಲ್ಲಿ ಕಾಣುವ ವಿಳಾಸ ಮತ್ತು ಸಹಿ ತನ್ನದು ಎಂದು ಒಪ್ಪಿಕೊಂಡ ಮೇರೆಗೆ ಸದರಿ ಹೇಳಿಕೆಯನ್ನು ನಿಡಿ1 ಎಂದು ಗುರುತಿಸಲಾಯಿತು. ನನಗೆ ಭರತ್ ರಾಜ್, ಲೋಕೇಶ್ ಮತ್ತು ಮಂಜುನಾಥ ಎಂಬುವವರ ಪರಿಚಯ ಇರುವುದಿಲ್ಲ. ಆರೋಪಿಯೂ ತನಗೆ ಸಂಬಂದಿಸಿದ ಖಾಲಿ ಚೆಕ್‌ಗಳನ್ನು ನಾವುಗಳು ದುರುಪಯೋಗಪಡಿಸಿಕೊಂಡಿದ್ದರಿಂದ ಆರೋಪಿ ನಮ್ಮ ಮೇಲೆ ಜಗಳೂರು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೂರಿಗೆ ಸಂಬಂದಿಸಿದ ಹಾಗೇ ನಿಡಿ1 ರಂತೆ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ1 ರಲ್ಲಿ ಕಾಣುವ ಸಹಿಯನ್ನು ನಾನು ಎಲ್ಲಿ ಯಾರ ಸಮಕ್ಷಮ ಮಾಡಿರುತ್ತೇನೆ ಎಂದು ನನಗೆ ನೆನಪು ಇರುವುದಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಈ ಪ್ರಕರಣಕ್ಕೆ ತೊಂದರೆ ಆಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಬಿಟ್ಟು ಬೇರೆ ಯಾರಿಗೂ ಸಹ ಚೆಕ್ ಪಡೆದುಕೊಂಡು ಸಾಲ ನೀಡಿರುವುದಿಲ್ಲ. ಈಗ ಸಾಕ್ಷಿಗೆ ಪಿಸಿಆರ್‌ಃ51/2021 ರ ದೃಡೀಕೃತ ಪಿರ್ಯಾದಿಯನ್ನು ತೋರಿಸಿ ಅದರಲಿಲ ಕಾಣುವ ಮಹಂತೇಶ್ ಒ ಮತ್ತು ವಿಳಾಸ ನನ್ನದೇ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ

ಒಪ್ಪಿಕೊಂಡ ಮೇರೆಗೆ ದಾಖಲೆಯನ್ನು ನಿಡಿ2 ಎಂದು ಗುರುತಿಸಲಾಯಿತು. ಸದರಿ ನಿಡಿ2 ಪಿರ್ಯಾದಿಯನ್ನು ರುದ್ರೇಶ್ ಎಂಬುವವರ ವಿರುದ್ದ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ರುದ್ರೇಶ್ ಯಾವ ದಿನಾಂಕದಂದು ಎಷ್ಟು ಹಣ ನೀಡಿರುತ್ತೇನೆ ಎಂದು ನೆನಪು ಇರುವುದಿಲ್ಲ. ನಿಡಿ2 ರಲ್ಲಿ ದಿಃ25.01.2021 ರಂದು ರುದ್ರೇಶ್ ಎಂಬುವವರು ರೂ.3 ಲಕ್ಷ ಹಣ ಕೇಳಿದ್ದು, ನಾನು ದಿಃ29.01.2021 ರಂದು ಅವರಿಗೆ ರೂ.3 ಲಕ್ಷ ಹಣ ನೀಡಿರುತ್ತೇನೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪ್ರಕರಣ ಈಗ ರಾಜಿ ಮೂಲಕ ಮುಗಿದಿರುತ್ತದೆ ಎಂದು ಹೇಳುತ್ತಾರೆ. ನಾನು ಬೇರೆಯವರಿಂದ ಚೆಕ್‌ಗಳನ್ನು ಪಡೆದುಕೊಂಡು ದುರುದ್ದೇಶದಿಂದ ಚೆಕ್ ಅಮಾನತು ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸದರಿ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಸಹಿ ಮಾಡಿರುವ ನೆನಪು ಇರುವುದಿಲ್ಲ. ನಿಡಿ2 ರಲ್ಲಿ ಕಾಣುವ ಸಹಿ ನನ್ನದು ಇರುವುದಿಲ್ಲ ಅದನ್ನು ಯಾರು ಬರೆದರು ಗೊತ್ತಿರುವುದಿಲ್ಲ. ಈಗ ಸಾಕ್ಷಿಗೆ ಪಿಸಿಆರ್‌ಃ51/2021 ರ ಪರಿಶೀಲನಾ ಪ್ರಮಾಣಪತ್ರ ತೋರಿಸಿ ಅದರಲ್ಲಿ ಕಾಣುವ ಮಹಂತೇಶ್ ಹೆಸರು ಮತ್ತು ವಿಳಾಸ ತನ್ನದೇ ಎಂದು ಒಪ್ಪಿಕೊಂಡು ಮೇರೆಗೆ ಅದನ್ನು ನಿಡಿ3 ಎಂದು ಗುರುತಿಸಲಾಯಿತು.

(ಆರೋಪಿಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

sd

ಸಿವಿಲ್ ನ್ಯಾಯಾಧೀಶರು, ಜಗಳೂರು